ದಿನಾಂಕಃ 18.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಸಿ.ವಿ.ಎಸ್ ಅವರಿಂದ –**

1. ನಾನು 10 ನೇ ತರಗತಿ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು-ಬರೆಯಲು ಸಾಧಾರಣವಾಗಿ ಬರುತ್ತದೆ. ನಾವು ಯಾವ ಆಧಾರದಲ್ಲಿ ನಮ್ಮ ಆಸ್ತಿಗಳನ್ನು ಮೌಲ್ಯಮಾಪನ ಗೊತ್ತಿಲ್ಲ. 1 ಎಕರೆಗೆ ಎಷ್ಟು ಬೆಲೆ ಎಂದು ನಾನು ತಿಳಿದುಕೊಂಡಿಲ್ಲ. ನನ್ನ ವಾದಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತು. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತು.

2. ನನ್ನ ತಂಗಿ ಶೈಲಜಾ 1 ನೇ ವಾದಿಯವರ ಸಾಕ್ಷಿ ವಿಚಾರಣೆಯಲ್ಲಿ ನಾನು ನ್ಯಾಯಾಲಯದಲ್ಲಿ ಬಂದು ಅದನ್ನು ಕೇಳಿಸಿಕೊಳ್ಳುತ್ತಿದ್ದೆ ಎಂದರೆ ಸರಿ. ಪ್ರತಿವಾದಿ ಸಲ್ಲಿಸಿರುವ ತಕರಾರನ್ನು ತಿಳಿದುಕೊಂಡಿದ್ದೇನೆ. ನನ್ನ ಅಕ್ಕ ತಂಗಿಯರಿಗೆ ಯಾವ ಯಾವ ವರ್ಷದಲ್ಲಿ ಮದುವೆಯಾಗಿದೆ ನನಗೆ ಗೊತ್ತಿದೆ. 1. ನನ್ನ ಸಹೋದರಿ ಹೇಮಾವತಿಯವರಿಗೆ 30 ವರ್ಷಗಳ ಹಿಂದೆ ಮದುವೆ ಆಗಿರುತ್ತದೆ. 2. ನನ್ನ ಸಹೋದರಿ 3 ನೇ ವಾದಿ ರಮಾವತಿಯವರಿಗೆ 1981 ರಲ್ಲಿ ಮದುವೆ ಆಗಿರುತ್ತದೆ. 3. 4 ನೇ ವಾದಿ ಶೈಲಜಾ ಅವರಿಗೆ 1997 ರಲ್ಲಿ ಮದುವೆ ಆಗಿರುತ್ತದೆ.

3. ಮದುವೆಗೆ ಮುಂಚೆ ನನ್ನ ಅಕ್ಕ-ತಂಗಿಯವರು ಯಾವುದೇ ಕೆಲಸಕ್ಕೆ ಹೋಗುತ್ತಿರಲ ನನ್ನ ತಂದೆ ಪಾಪೇಗೌಡ ಎಂದರೆ ಸರಿ. ನನ್ನ ತಾತನ ಹೆಸರು ಹೆಚ್ ಪಿ ಪುಟ್ಟೇಗೌಡ ಎಂದರೆ ಸರಿ. ನನ್ನ ತಾತನ ತಂದೆ ಹೆಸರು ಮುದ್ದೇಗೌಡ. ಸದರಿ ಮುದ್ದೇಗೌಡರಿಗೆ ಎಷ್ಟು ಮಕ್ಕಳು ನನಗೆ ಗೊತ್ತಿಲ್ಲ.

4. ನಾನು ಯಾವ ಆಧಾರದ ಮೇಲೆ ವಂಶವೃಕ್ಷ ನೀಡಿರುತ್ತೇನೆ ಎಂಬ ಪ್ರಶ್ನೆಗೆ ಈ ಬಗ್ಗೆ ನನಗೆ ಗೊತ್ತಿತ್ತು ಮುದ್ದೇಗೌಡರಿಗೆ ಎಷ್ಟು ಜನ ಮಕ್ಕಳು ಎಂದು ಸಾಕ್ಷಿ ಮುಂದುವರಿದು ನುಡಿಯುತ್ತಾರೆ. ನನ್ನ ತಂದೆ 2004 ತೀರಿಹೋಗಿರುತ್ತಾರೆ. ನನ್ನ ತಾಯಿ 2016 ರಲ್ಲಿ ತೀರಿಹೋಗಿರುತ್ತಾರೆ. ನನ್ನ ತಂದೆ ತೀರಿಹೋದ ನಂತರ ಮನೆ ಜವಾಬ್ದಾರಿಯನ್ನು ಪ್ರತಿವಾದಿ ನಿಭಾಯಿಸುತ್ತಿದ್ದರು ಎಂದರೆ ಸರಿ.

5. ನಾನು ಹಾಲಿನ ಡೈರಿಯಲ್ಲಿ ಕಾರ್ಯದರ್ಶಿಯಾಗಿದ್ದೆ ಎಂದರೆ ಸರಿ. 1989 ರಲ್ಲಿ ನಾನು ಸದರಿ ಕೆಲಸ ಬಿಟ್ಟಿರುತ್ತೇನೆ. ನನ್ನ ಸಹೋದರಿಯರ ಹೇಳಿಕೆ ಮೇಲೆ ನನಗೆ ವ್ಯತ್ಯಾಸ ಇಲ್ಲ. ನಾನು ಅವ್ಯವಹಾರ ಮಾಡಿ ಹಣ ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದು ನನ್ನನ್ನು ಕಾರ್ಯದರ್ಶಿ ಹುದ್ದೆಯಿಂದ ತೆಗೆದುಹಾಕಿರುತ್ತಾರೆ ಎಂದರೆ ಸುಳ್ಳು.

6. 1 ನೇ ವಾದಿ ಹೇಮಾವತಿಯವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. 1. ಸರಿತಾ 2. ಮಹದೇವ ಎಂದರೆ ಸರಿ. ಸದರಿ ಇಬ್ಬರು ಮಕ್ಕಳ ಮದುವೆಗೆ ಪ್ರತಿವಾದಿ ಸಹಾಯ ಮಾಡಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆ ನಿಂತು ಮದುವೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂಗಿ ನುಡಿದಿರುವ ಸಾಕ್ಷಿಯ ನ್ಯೂನ್ಯತೆಗಳನ್ನು ಸರಿಪಡಿಸಲು ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮುಂದುವರಿದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.